# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 54

ಸ್ವಾಮಿ ನಿತ್ಯಸ್ಥಾನಂದ

## ಸಮತ್ವ

ಶ್ರೀರಾಮಕೃಷ್ಣರು: ‘‘ಯಾರಿಗೆ ಆತ್ಮಜಾಗ್ರತಿ ಉಂಟಾಗಿದೆಯೋ ಅವರು ಪಾಪಪುಣ್ಯಗಳಿಗೆ ಅತೀತರು. ಅವರ ಕಣ್ಣಿಗೆ ಬೀಳುತ್ತದೆ, ಭಗವಂತನೇ ಎಲ್ಲವನ್ನೂ ಮಾಡುತ್ತಿರುವುದು.

‘‘ಒಂದು ಜಾಗದಲ್ಲಿ ಒಂದು ಆಶ್ರಮ ಇತ್ತು. ಅಲ್ಲಿನ ಸಾಧುಗಳು ದಿನವೂ ಮಧುಕರಿಗೆ ಹೋಗುತ್ತಿದ್ದರು. ಒಂದು ದಿನ ಒಬ್ಬ ಸಾಧು ಮಧುಕರಿಗೆ ಹೋಗಿದ್ದಾಗ, ಒಬ್ಬ ಜಮೀನುದಾರ ಒಬ್ಬನನ್ನು ಬಹಳವಾಗಿ ಹೊಡೆಯುತ್ತಿದ್ದುದನ್ನು ನೋಡಿದ. ಸಾಧು ಒಳ್ಳೆ ಪರಮ ದಯಾಳು. ಆತ ಅಡ್ಡಲಾಗಿ ಬಂದು ಹೊಡೆಯಬೇಡವೆಂದು ಹೇಳಿದ. ಆ ಜಮೀನುದಾರನ ಕೋಪ ಬಹಳವಾಗಿ ಕೆರಳಿತ್ತು. ಅದನ್ನು ಆತ ಆ ಬಡ ಸಾಧುವಿನ ಕಡೆಗೆ ತಿರುಗಿಸಿದ. ಆತ ಆ ರೀತಿಯಾಗಿ ಹೊಡೆದ, ಸಾಧು ಪ್ರಜ್ಞೆ ತಪ್ಪಿ ನೆಲಕ್ಕೆ ಬಿದ್ದ! ಯಾರೋ ಬಂದು ಈ ಸಮಾಚಾರವನ್ನು ಆಶ್ರಮಕ್ಕೆ ತಿಳಿಸಿದರು. ಸಾಧುಗಳು ಓಡಿ ಬಂದು ನೋಡುತ್ತಾರೆ, ತಮ್ಮ ಸೋದರ ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ. ಅವರಲ್ಲಿ ನಾಲ್ಕೈದು ಜನ ಸೇರಿಕೊಂಡು ಆತನನ್ನು ಆಶ್ರಮಕ್ಕೆ ಎತ್ತಿಕೊಂಡು ಹೋಗಿ ಹಾಸಿಗೆಯ ಮೇಲೆ ಮಲಗಿಸಿದರು. ಆತನಿಗೆ ಇನ್ನೂ ಪ್ರಜ್ಞೆ ಬಂದಿರಲಿಲ್ಲ. ಉಳಿದ ಸಾಧುಗಳು ಚಿಂತಾಕ್ರಾಂತರಾಗಿ ಆತನ ಸುತ್ತಲೂ ಕುಳಿತುಕೊಂಡರು. ಕೆಲವರು ಆತನಿಗೆ ಗಾಳಿ ಬೀಸಲಾರಂಭಿಸಿದರು. ಅವರಲ್ಲಿ ಒಬ್ಬ ಸಲಹೆ ಇತ್ತ, ಬಾಯಿಗೆ ಸ್ವಲ್ಪ ಹಾಲು ಬಿಡುವುದು ಒಳ್ಳೆಯದು ಎಂದು. ಬಾಯಿಗೆ ಹಾಲು ಬಿಡುತ್ತ ಬಿಡುತ್ತ ಆ ಸಾಧು ಚೇತರಿಸಿಕೊಳ್ಳಲಾರಂಭಿಸಿದ. ಕಣ್ಣು ಬಿಟ್ಟು ದಿಟ್ಟಿಸಿ ನೋಡಲಾರಂಭಿಸಿದ. ಒಬ್ಬ ಸಾಧು ಹೇಳಿದ: ‘ಎಲ್ಲಿ ನೋಡೋಣ, ಜ್ಞಾನ ಬಂದಿದೆಯೇ ಇಲ್ಲವೇ; ನಮ್ಮನ್ನು ಗುರುತಿಸುತ್ತಾನೆಯೇ ಇಲ್ಲವೇ.’ ಆಗ ಆತ ಗಟ್ಟಿಯಾಗಿ ಕೂಗಿ ಹೇಳಿದ: ‘ಮಹಾರಾಜ್, ನಿಮಗೆ ಹಾಲು ಯಾರು ಕುಡಿಸುತ್ತ ಇದ್ದಾರೆ?’ ಆ ಸಾಧು ಮೆತ್ತ ಮೆತ್ತಗೆ ಉಸಿರೆಳೆದು ಹೇಳಿದ: ‘ಸೋದರ, ಯಾರು ನನ್ನನ್ನು ಬಡಿದು ಹಾಕಿದನೋ ಆತನೇ ಈಗ ಹಾಲು ಕುಡಿಸುತ್ತಿದ್ದಾನೆ.’

‘‘ಭಗವಂತನ ಸಾಕ್ಷಾತ್ಕಾರ ದೊರೆಯದ ಹೊರತು ಈ ರೀತಿಯ ಮಾನಸಿಕ ಅವಸ್ಥೆ ಉಂಟಾಗದು.’’ *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೬೬-೬೭)*

ಈ ಮೇಲಿನ ಕಥೆಯಿಂದ ನಾವು ಕಲಿಯಬಹುದಾದ ಪಾಠಗಳು:



೧) ಸಾಕ್ಷಾತ್ಕಾರವಾದ ಮೇಲೆ ಆ ಶ್ರೇಷ್ಠವಾದ ಸಮತ್ವ ಭಾವ ಬರುವುದಾದರೂ, ನಾವೂ ಕೂಡ ಆ ಸಮತ್ವ ಭಾವವನ್ನು ಬೆಳೆಸಿಕೊಳ್ಳಲು ಪ್ರಯತ್ನಪಡಬಹುದು.

೨) ಆಂತರಿಕ ಪ್ರತಿಕ್ರಿಯೆ ಇಲ್ಲದೆ ಕಷ್ಟಗಳನ್ನು ಸಹಿಸುವ ಸಾಮರ್ಥ್ಯ ನಮಗಿರಬೇಕು. ಹೊಡೆತ ಬಿದ್ದಾಗ ಮನಸ್ಸು ವಿಚಲಿತವಾದರೂ ಆದಷ್ಟು ಬೇಗ ಸಮತೋಲನಕ್ಕೆ ಬರುವಂತೆ ನೋಡಿಕೊಳ್ಳಬೇಕು.

೩) ಶತ್ರುತ್ವ ಭಾವವಿರಬಾರದು, ಅದರಿಂದ ನಮಗೇ ಹಾನಿ. ‘Forgiving for good’ ಎಂಬ ಪುಸ್ತಕದಲ್ಲಿ Fred Lustkin ಹೇಳುತ್ತಾರೆ: ‘‘ನೋವಿನ ಭಾವವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದು, ಹಗೆತನವನ್ನು ಪೋಷಿಸುವುದು ದೈಹಿಕವಾಗಿಯೂ

ಮಾನಸಿಕವಾಗಿಯೂ ನಮ್ಮನ್ನು ಕ್ಷೀಣಿಸುತ್ತದೆ. ಇತರರನ್ನು ಕ್ಷಮಿಸುವುದು ದ್ವೇಷವೆಂಬ ವಿಷಕ್ಕೆ ಅತ್ಯುತ್ತಮ ಪರಿಹಾರ.''

**ತಂದೆ:** ನಮ್ಮೊಳಗೆ ಯಾವಾಗಲೂ ಜಗಳಮಾಡುತ್ತಿರುವ ಎರಡು ತೋಳಗಳಿವೆ.

**ಮಗ:** ಅವು ಯಾವುವು?

**ತಂದೆ:** ಒಂದು ಸಕಾರಾತ್ಮಕ ಭಾವ, ಮತ್ತೊಂದು ನಿಷೇಧಾತ್ಮಕ ಭಾವ.

**ಮಗ:** ಇವುಗಳಲ್ಲಿ ಯಾವ ತೋಳ ಜಗಳದಲ್ಲಿ ಗೆಲ್ಲುತ್ತದೆ?

**ತಂದೆ:** ನೀನು ಯಾವುದನ್ನು ಪೋಷಿಸುತ್ತೀಯೋ ಅದು.

೪) ಸಮತ್ವಭಾವ: ಇಲ್ಲಿ ಮೂರು ಅಂಶಗಳನ್ನು ಪರಿಗಣಿಸಬಹುದು. ಮೊದಲನೆಯದಾಗಿ ಎಲ್ಲರನ್ನೂ ಸಮಾನವಾಗಿ ಕಾಣುವುದು. ಎರಡನೆಯದಾಗಿ ಸುಖದುಃಖಾದಿ ದ್ವಂದ್ವಗಳನ್ನು ಸಮಾನವಾಗಿ ಕಾಣುವುದು. ಮೂರನೆಯದು ಮನಸ್ಸಿನಲ್ಲಾಗುವ ಏರುಪೇರುಗಳಿಂದ ವಿಚಲಿತರಾಗದೆ ಇರುವುದು.

## ದಾನಕ್ಕಾಗಿ ಧನ

ಶ್ರೀರಾಮಕೃಷ್ಣರು: (ಮಣಿಲಾಲನಿಗೆ): ''ರಾಖಾಲ ಹೇಳುತ್ತಿದ್ದಾನೆ, ಅವರ ಊರಿನಲ್ಲಿ ನೀರಿನ ಅಭಾವ ಬಹಳ ಅಧಿಕ ಎಂಬುದಾಗಿ. ನೀನು ಏಕೆ ಅಲ್ಲಿ ಒಂದು ಕೊಳ ತೋಡಿಸಬಾರದು? ಅದು ಬಹಳ ಜನರಿಗೆ ಉಪಕಾರ ಮಾಡಿದಂತಾಗುತ್ತದೆ. (ನಗುತ್ತ) ನಿನ್ನಲ್ಲಿ ತುಂಬಾ ಹಣ ಇದೆ. ಇಟ್ಟುಕೊಂಡು ಏನು ಮಾಡುತ್ತೀಯೆ? ಆದರೆ ಕೇಳಿದ್ದೇನೆ, ಗಾಣಿಗರು ತುಂಬ ಲೆಕ್ಕಾಚಾರ ಬುದ್ಧಿಯುಳ್ಳವರು ಎಂಬುದಾಗಿ'' (ಎಲ್ಲರೂ ನಗುತ್ತಾರೆ.) *(ಅಲ್ಲೇ, ಪು.೧೬೭)*

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ಕೆಲವು ವ್ಯಕ್ತಿ ಮತ್ತು ಸಂಸ್ಥೆಗಳಲ್ಲಿ ಸಂಪತ್ತು ಮತ್ತು ಅಧಿಕಾರ ಶೇಖರವಾಗುವುದು ಇತರರಿಗೆ ಹಂಚುವುದಕ್ಕಾಗಿ.'' ಆ ರೀತಿ ಹಂಚಿದಾಗ ಸಾರ್ಥಕತೆಯ ಸುಖ ನಮಗುಂಟಾಗುತ್ತದೆ. ಕೇವಲ ಕೂಡಿಟ್ಟ ಹಣ ನಮಗೆ ಹೇಗೆ ಸುಖವನ್ನು ನೀಡಬಲ್ಲದು? ಒಂದು ಮಿತಿಯನ್ನು ಮೀರಿ ಹಣವು ಶೇಖರವಾಗಲು ತೊಡಗಿದಾಗ ಅದನ್ನು ಇನ್ನೂ ಹೆಚ್ಚಿಸುವ ಪ್ರಯತ್ನದಲ್ಲಿ ಮನುಷ್ಯ ಸೋತುಹೋಗುತ್ತಾನೆ, ಬಡವನಾಗುತ್ತಾನೆ. ಸಂಸ್ಕೃತದ ಒಂದು ಸುಭಾಷಿತ:

**ಕೃಪಣೇನ ಸಮೋ ದಾತಾ ನ ಭೂತೋ ನ ಭವಿಷ್ಯತಿ ।**
**ಅಸ್ಪೃಶನ್ನಪಿ ವಿತ್ತಾನಿ ಯಃ ಪರೇಭ್ಯಃ ಪ್ರದಾಸ್ಯತಿ ॥**

''ಜಿಪುಣನಿಗೆ ಸಮಾನವಾದ ದಾನಿ ಹಿಂದೆಯೂ ಇರಲಿಲ್ಲ, ಮುಂದೆಯೂ ಇರಲು ಸಾಧ್ಯವಿಲ್ಲ. ಏಕೆಂದರೆ, ಅವನು ತನ್ನ ಸಂಪತ್ತನ್ನು ಮುಟ್ಟದೆಯೇ ಇತರರಿಗೆ ಬಿಟ್ಟು ಹೋಗುತ್ತಾನೆ.'' ಇದೇ ರೀತಿಯ ಇನ್ನೊಂದು ಶ್ಲೋಕ:

**ಉಭಯೋರ್ನಾಸ್ತಿ ಭೋಗೇಚ್ಛಾ ಪರಾರ್ಥಂ ಧನಸಂಚಯಃ ।**
**ಕೃಪಣೋದಾರಯೋಃ ಪಶ್ಯ ತಥಾಪಿ ಮಹದಂತರಮ್ ॥**

''ಕೃಪಣ ಮತ್ತು ಉದಾರಿ ಇವರಿಬ್ಬರಲ್ಲಿಯೂ ಭೋಗೇಚ್ಛೆ ಇಲ್ಲ, ಮತ್ತು ಅವರ ಧನಸಂಚಯ ಇತರರಿಗಾಗಿ. ಆದರೂ ಅವರಿಬ್ಬರಲ್ಲಿಯೂ ಇರುವ ಮಹದಂತರವನ್ನು ಗಮನಿಸು!!''

ಒಬ್ಬ ಶ್ರೀಮಂತನಿದ್ದ, ಅತ್ಯಂತ ಜಿಪುಣ. ಅವನಲ್ಲಿ ಎಷ್ಟು ಹಣವಿದೆ ಎಂಬುದು ಯಾರಿಗೂ, ಮನೆಯವರಿಗೂ ಗೊತ್ತಿರಲಿಲ್ಲ. ತಾನು ಕೂಡಿಟ್ಟ ಹಣದ ಪೆಟ್ಟಿಗೆಯ ಬೀಗದ ಕೈಯನ್ನು ತನ್ನೊಡನೆಯೇ ಇಟ್ಟುಕೊಂಡಿರುತ್ತಿದ್ದ. ವಯಸ್ಸಾಯಿತು, ಅನೇಕ ಕಾಯಿಲೆಗಳಿಗೆ ತುತ್ತಾಗಿ ಮರಣಶಯ್ಯೆಯಲ್ಲಿ ಮಲಗಿದ್ದಾನೆ. ಸಾಯುವ ಮುನ್ನ ಅವನ ಬಾಯಿಗೆ ಗಂಗಾಜಲವನ್ನು ಸುರಿಯಲು ಪ್ರಯತ್ನಿಸಿದಾಗ ಆತ ಬಾಯಿ ತೆರೆಯಲೇ ಇಲ್ಲ. ಹಾಗೆಯೇ ಮುಖದ ಮೇಲೆ ನೀರನ್ನು ಚಿಮುಕಿಸಿದರು. ಸಾವಿನ ನಂತರ ಅವನ ದೇಹವನ್ನು ಭಸ್ಮೀಕರಿಸಿದರು. ಮರುದಿನ ಅಸ್ಥಿಯನ್ನು ಕಲೆಹಾಕಲು ಹೋದಾಗ ಬೂದಿಯ ಮಧ್ಯೆ ಹಣದ ಪೆಟ್ಟಿಗೆಯ ಬೀಗದಕೈ ಸಿಕ್ಕಿತು. ಆಗ ಎಲ್ಲರಿಗೂ ತಿಳಿದು ಬಂತು, ಗಂಗಾಜಲವನ್ನು ಬಾಯಿಗೆ ಬಿಡುವಾಗ ಅವನೇಕೆ ಬಾಯಿ ತೆರೆಯಲಿಲ್ಲವೆಂದು!

## ಪ್ರೇಮದ ಲಕ್ಷಣ

**ಶ್ರೀರಾಮಕೃಷ್ಣರು:** ''ನೀನು 'ಪ್ರೇಮ' 'ಪ್ರೇಮ' ಅನ್ನುತ್ತಲೇ ಇರುತ್ತಿರು. ಅದೇನು ಮೂರು ಕಾಸಿಗೆ ಸಿಕ್ಕತಕ್ಕದ್ದೆ? ಚೈತನ್ಯದೇವನಲ್ಲಿ ಪ್ರೇಮ ಉಂಟಾಗಿತ್ತು. ಅದಕ್ಕೆ ಎರಡು ವಿಶೇಷ ಗುಣಗಳಿವೆ. ಮೊದಲನೆಯದು: ಅದು ಈ ಜಗತ್ತನ್ನು ಮರೆಯುವಂತೆ ಮಾಡುತ್ತದೆ. ಭಗವಂತನನ್ನು ಕಂಡರೆ ಬಹಳ ಪ್ರೀತಿ. ಭಕ್ತ ಬಾಹ್ಯಜ್ಞಾನ ಶೂನ್ಯನಾಗಿಬಿಡುತ್ತಾನೆ. ಚೈತನ್ಯನು 'ವನ ನೋಡಿ ಅದೇ ಬೃಂದಾವನ ಎಂದು ಭಾವಿಸಿದ, ಸಮುದ್ರ ನೋಡಿ ಅದೇ ಯಮುನೆ ಅಂತ ಭಾವಿಸಿದ.' ಎರಡನೆಯದು: ಸ್ವಂತ ದೇಹ ಪ್ರತಿಯೊಬ್ಬನಿಗೂ ಬಹಳ ಪ್ರಿಯವಾದ ವಸ್ತು. ಅದರ ಮೇಲೂ ಮಮತೆ ಇರುವುದಿಲ್ಲ. ದೇಹಾತ್ಮಬುದ್ಧಿ ಅವನನ್ನು ಒಮ್ಮೆಗೇ ಬಿಟ್ಟು ತೊಲಗಿ ಹೋಗಿಬಿಡುತ್ತದೆ.'' *(ಅಲ್ಲೇ, ಪು.೧೬೮)*

ನಾವು ಪ್ರೀತಿಸುತ್ತೇವೆ ಎನ್ನುತ್ತೇವೆ, ಆದರೆ ನಾವು ಪ್ರೀತಿಸುವುದು ಪ್ರಾಪಂಚಿಕ ವಿಷಯವನ್ನೇ. ಒಬ್ಬ ಹುಡುಗನು ಸ್ವಾಮಿ ಯತೀಶ್ವರಾನಂದರ ಬಳಿ ಬಂದು, 'ನಾನು ದೇವರನ್ನು ನೋಡಬೇಕು' ಎಂದು ಕೇಳಿದನಂತೆ. ಸ್ವಾಮೀಜಿಯವರು ಆತನಿಗೆ ಎರಡು ಚಾಕಲೇಟ್ ಕೊಟ್ಟರಂತೆ. ಕೂಡಲೇ ಥ್ಯಾಂಕ್ಸ್ ಅಂತ ಹೇಳಿ ಓಡಿಹೋದನಂತೆ! ನಮ್ಮ ದೇವರ ಬಯಕೆ ಚಾಕಲೇಟ್ ಸಿಗುವವರೆಗೆ.

ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ: ''ಯಾವುದೇ ಸಂದರ್ಭದಲ್ಲಾದರೂ ನಾವು ಯಾವುದನ್ನು ಸತ್ಯವೆಂದು ಸ್ವೀಕರಿಸುತ್ತೇವೆಯೊ ಅದು ನಮ್ಮ ಸಂಪೂರ್ಣ ವ್ಯಕ್ತಿತ್ವ, ಚಿಂತನೆ, ಭಾವನೆ ಮತ್ತು ಕೃತಿ – ಇವುಗಳ ಮೇಲೆ ಪರಿಣಾಮವನ್ನು ಉಂಟು ಮಾಡುತ್ತದೆ. ನಮ್ಮ ಸಂಪೂರ್ಣ ವ್ಯಕ್ತಿತ್ವವು ಆ ಸತ್ಯಕ್ಕೆ ಪ್ರತಿಸ್ಪಂದಿಸುತ್ತದೆ.'' *('ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ', ಮೈಸೂರು ಆಶ್ರಮ, ಪು. ೯–೧೦)*

## ಇದಕ್ಕೆ ಸಂಬಂಧಪಟ್ಟ ಒಂದು ಕಥೆ

ಓರ್ವ ರಾಜನು ಪರಮ ದೈವಭಕ್ತನಾಗಿದ್ದನು. ಅವನು ಬಹಳ ನಿಷ್ಠೆಯಿಂದ ದೂರದ ಒಂದು ದೇವಾಲಯದಲ್ಲಿ ತಪಸ್ಸು ಮಾಡುತ್ತಿದ್ದನು. ಅವನ ಭಕ್ತಿಗೆ ಮೆಚ್ಚಿ ಭಗವಂತನು ಅವನಿಗೆ ದರ್ಶನ ನೀಡಿದನು. ರಾಜನಿಗೆ ಇನ್ನಿಲ್ಲದ ಆನಂದ. ''ನಿನಗೇನು ಬೇಕು?'' ಎಂದು ದೇವರು ಕೇಳಿದಾಗ ರಾಜನು, ''ನಿನ್ನ ದರ್ಶನವಾದ ಮೇಲೆ ನನಗಿನ್ನಾವ ಆಸೆಯೂ ಉಳಿದಿಲ್ಲ. ಆದರೆ ನನ್ನದೊಂದು ಬೇಡಿಕೆ, ನಿನ್ನ ದರ್ಶನದಿಂದ ನನಗೆಂತಹ ಆನಂದ ಉಂಟಾಗಿದೆಯೋ ಅದೇ ಆನಂದವು ನನ್ನ ಪ್ರಜೆಗಳಿಗೂ ಆಗಬೇಕೆಂಬುದು. ಆದ್ದರಿಂದ ಅವರೆಲ್ಲರಿಗೂ ನಿನ್ನ ದರ್ಶನವನ್ನು ದಯಪಾಲಿಸು.''

ಭಗವಂತನು ಹೇಳಿದ ''ಅದು ಹೇಗೆ ಸಾಧ್ಯ ? ನೀನು ಬಯಸಿದೆ, ನಿನಗೆ ದೊರಕಿತು. ಅವರೂ ನಿನ್ನಂತೆಯೇ ತೀವ್ರವಾಗಿ ಬಯಸುವುದಾದರೆ, ಸಾಧನೆ ಮಾಡುವುದಾದರೆ ಅವರಿಗೂ ಲಭ್ಯ.'' ಆದರೆ ರಾಜನಿಗೆ ಸಮಾಧಾನವಾಗಲಿಲ್ಲ, ಅವನು ಭಗವಂತನನ್ನು ತುಂಬ ಒತ್ತಾಯಿಸಿದ. ಆಗ ಭಗವಂತನು ಹೇಳಿದ ''ಆಗಲಿ, ನಾಳೆ ನೀನು ಎಲ್ಲ ಪ್ರಜೆಗಳನ್ನೂ ಇಲ್ಲಿಗೆ ಕರೆದುಕೊಂಡು ಬಾ. ನಾನು ದರ್ಶನ ನೀಡುತ್ತೇನೆ.'' ರಾಜನಿಗೆ ಆನಂದವೋ ಆನಂದ. ಅವನು ಹೋಗಿ ಅರಮನೆಯ ವಾಸಿಗಳಿಗೂ ಊರಿನ ಪ್ರಜೆಗಳಿಗೂ ಈ ಸಂತಸದ ಸುದ್ದಿಯನ್ನು ಸಾರಿದ. ಮರುದಿನ ಬೆಳಿಗ್ಗೆ ಅರಮನೆ ವಾಸಿಗಳೂ ಊರಿನ ಪ್ರಜೆಗಳೂ ಸೇರಿದರು. ಎಲ್ಲರೂ ದೊಡ್ಡ ಮೆರವಣಿಗೆಯಲ್ಲಿ ದೇವಾಲಯದ ಕಡೆ ಹೊರಟರು. ರಾಜನು ಮುಂದೆ ಭಗವದ್ಭಾವದಲ್ಲಿ ತಲ್ಲೀನನಾಗಿ ಹೋಗುತ್ತಿದ್ದಾನೆ. ಅವನ ಹಿಂದೆ ಇತರರು. ಒಂದು ಕಡೆ ಬೆಳ್ಳಿಯ ಗಣಿ ಕಾಣಿಸಿತು, ಅನೇಕರು ಅದನ್ನರಸಿಕೊಂಡು ಹೊರಟು ಹೋದರು. ಮುಂದೆ ಚಿನ್ನದ ಗಣಿ, ಎಲ್ಲ ಕಡೆ ಚಿನ್ನ ಹರಡಿಕೊಂಡಿದೆ. ಮತ್ತನೇಕರು ಚಿನ್ನವನ್ನು ಕಲೆಹಾಕಲು ಮುನ್ನುಗ್ಗಿದ್ದರು. ಇನ್ನೂ ಮುಂದುವರಿದ ಮೇಲೆ ವಜ್ರದ ಗಣಿ. ಮತ್ತನೇಕರು ವಜ್ರಾಕರ್ಷಿತರಾಗಿ ಅದನ್ನರಸಿಕೊಂಡು ಹೋದರು. ದೇವಾಲಯದ ಹತ್ತಿರ ಹೋದಾಗ, ದೇವರು ಕೇಳಿದನು, ''ಎಲೈ ರಾಜನೇ, ಎಲ್ಲಿ ನಿನ್ನ ಪರಿವಾರದವರು?'' ರಾಜ ಹಿಂತಿರುಗಿ ನೋಡುತ್ತಾನೆ, ಯಾರೂ ಇಲ್ಲ.

## ಅನುರಾಗದ ಸಂಪತ್ತು

ಶ್ರೀರಾಮಕೃಷ್ಣರು: ''ಭಗವಂತನ ಸಾಕ್ಷಾತ್ಕಾರ ದೊರೆಯುವುದಕ್ಕೆ ಕೆಲವು ಚಿಹ್ನೆಗಳಿವೆ. ಯಾರಲ್ಲಿ ಅನುರಾಗ ಸಂಪತ್ತು ವಿಶೇಷವಾಗಿ ವ್ಯಕ್ತವಾಗಿದೆಯೊ ಅವರು ಭಗವಂತನ ಸಾಕ್ಷಾತ್ಕಾರಕ್ಕಾಗಿ ಇನ್ನು ಹೆಚ್ಚು ಕಾಲ ಕಾಯಬೇಕಾಗಿರುವುದಿಲ್ಲ. ಅನುರಾಗದ ಸಂಪತ್ತು ಯಾವ್ಯಾವುವು? ವಿವೇಕ, ವೈರಾಗ್ಯ, ಭೂತದಯೆ, ಸಾಧುಸೇವೆ, ಸಾಧುಸಂಗ, ಭಗವನ್ನಾಮಗುಣಕೀರ್ತನೆ, ಸತ್ಯವಚನ ಇವೇ ಮೊದಲಾದವು. ಇವೆಲ್ಲ ಸಾಧಕನಲ್ಲಿ ಇರುವುದು ಕಂಡುಬಂದರೆ ನಿಸ್ಸಂದೇಹವಾಗಿ ಹೇಳಿಬಿಡಬಹುದು, ಆತನ ಭಗವತ್ ಸಾಕ್ಷಾತ್ಕಾರಕ್ಕೆ ಇನ್ನು ಹೆಚ್ಚು ವಿಳಂಬವೇನಿಲ್ಲ ಎಂಬುದಾಗಿ.''

''ಸೇವಕನ ಮನೆಯ ವ್ಯವಸ್ಥೆಯೇ ನಿಸ್ಸಂದೇಹವಾಗಿ ತಿಳಿಸಿಬಿಡುತ್ತದೆ, ಅಲ್ಲಿಗೆ ಆತನ ಯಜಮಾನ ಭೇಟಿಕೊಡುವನೇ ಇಲ್ಲವೇ ಎಂದು. ಮೊದಲನೆಯದಾಗಿ ಆಳಿನ ಮನೆಯ ಸುತ್ತಲೂ ಬೆಳೆದಿದ್ದ ಕಾಡೆಲ್ಲ ಹೋಗಿ ಸ್ವಚ್ಛವಾಗಿ ಕಾಣುತ್ತದೆ. ಎರಡನೆಯದಾಗಿ, ಮನೆಯ ಒಳಗೆಲ್ಲ ಸಾರಿಸಿ ಗುಡಿಸಿ ಅಲಂಕಾರ ಮಾಡಿರುತ್ತದೆ. ಮೂರನೆಯದಾಗಿ ಅಂಗಳ ಪರಿಷ್ಕಾರ ಪರಿಚ್ಛಿನ್ನವಾಗಿರುತ್ತದೆ. ಕೊನೆಯಲ್ಲಿ ಯಜಮಾನನೇ ಅಲ್ಲಿಗೆ ತನ್ನ ರತ್ನಗಂಬಳಿ, ಗುಡು ಗುಡಿ, ಇನ್ನು ಏನೇನೋ ವಸ್ತುಗಳನ್ನು ಕಳಿಸಿಕೊಡುತ್ತಾನೆ. ಇವೆಲ್ಲ ಬರುತ್ತಿರುವುದು ಕಣ್ಣಿಗೆ ಬಿತ್ತು ಎಂದರೆ ಜನ ನಿಸ್ಸಂದೇಹವಾಗಿ ಭಾವಿಸಿಕೊಳ್ಳುತ್ತಾರೆ, ಯಜಮಾನ ಈ ಮನೆಗೆ ಭೇಟಿ ಕೊಡುವುದರಲ್ಲಿದ್ದಾನೆ ಎಂಬುದಾಗಿ.'' *(ಶ್ರೀರಾಮಕೃಷ್ಣ ವಚನ ವೇದ, ಭಾಗ ೧, ಪು.೧೬೮)*

'ರಾಮಾಯಣ ಭಾವಧಾರೆ' ಎಂಬ ಗ್ರಂಥದಲ್ಲಿ ಶ್ರೀ ಡೋಂಗ್ರೆ ಮಹಾರಾಜರು ಹೇಳುತ್ತಾರೆ: ''ಶ್ರೀರಾಮನ ಸೇವೆಯೆಂದರೆ ಶ್ರೀರಾಮನ ಮರ್ಯಾದೆಯನ್ನು ಪಾಲಿಸುವುದು. ಅದನ್ನು ಪಾಲಿಸಿದರೆ ನಮ್ಮ ಮನಸ್ಸಿನ ರಾವಣ(ಕಾಮ) ಸಾಯುತ್ತಾನೆ. ಆಗ ಭಗವಾನ್ ಶ್ರೀಕೃಷ್ಣನು ಬರುತ್ತಾನೆ. ಶ್ರೀರಾಮನ ಹಿಂದೆಯೇ ಶ್ರೀಕೃಷ್ಣನೂ ಬರುತ್ತಾನೆ.'' *(ಪು.೧೧೫)* ಶ್ರೀರಾಮನ ಮರ್ಯಾದೆ, ಶ್ರೀಕೃಷ್ಣನ ಪ್ರೇಮ ಇವೆರಡಿದ್ದರೆ ಶ್ರೀರಾಮಕೃಷ್ಣರು ದೊರಕುತ್ತಾರೆ.

ಶ್ರೀಕೃಷ್ಣನಿಗೆ ಬೆಣ್ಣೆ–ಸಕ್ಕರೆ ಇಷ್ಟವಂತೆ. ಯಾರು ಬೆಣ್ಣೆಯಂತೆ ಮೃದುವಾಗಿಯೂ ಸಕ್ಕರೆಯಂತೆ ಮಧುರವಾಗಿಯೂ ಇರುತ್ತಾರೋ ಅವರೆಡೆಗೆ ಕೃಷ್ಣ ಓಡೋಡಿ ಬರುತ್ತಾನೆ. *(ಅಲ್ಲೇ, ಪು. ೧೨೮)*

**(ಮುಂದುವರಿಯುವುದು)**